## ಸೂಕ್ತಿಪ್ರಭ

ಗಾಳಿ ಮೋಡವನ್ನು ಚದುರಿಸುವಂತೆ ಭಗವಂತನ ನಾಮ ಅಜ್ಞಾನದ ಮೋಡವನ್ನು ಚದುರಿಸುತ್ತದೆ.

ಯಾರು ಬೇಕಾದರೂ ಒಡೆದು ಹಾಳು ಮಾಡುತ್ತಾರೆ. ಆದರೆ ಕಟ್ಟಿನಿಲ್ಲಿಸುವುದಕ್ಕೆ ಎಷ್ಟು ಜನರಿಂದ ಸಾಧ್ಯ?

ಗಂಗೆಯ ಮೇಲೆ ಎಷ್ಟೋ ಕೊಳೆಯ ವಸ್ತುಗಳು ತೇಲಿಕೊಂಡು ಹೋಗುತ್ತಿರುತ್ತವೆ. ಹಾಗೆಂದು ಗಂಗೆ ಎಂದಾದರೂ ಅಶುದ್ಧವಾಗುತ್ತದೆಯೆ?

ಇತರರಿಗೆ ಸಂತೋಷವನ್ನು ಕೊಡಲು ಸಾಧ್ಯವಾದಾಗ ಮಾತ್ರ ಮನುಷ್ಯನ ಜೀವನ ಸಾರ್ಥಕವಾಗುತ್ತದೆ.

ಕ್ಷಮೆಯೇ ತಪಸ್ಸು.

ಭಕ್ತರಿಗೆ ಯಾವ ಜಾತಿಯೂ ಇಲ್ಲ.

ಶ್ರೀಮಂತರು ಹಣದ ಮೂಲಕ ದೇವರ, ಭಕ್ತರ ಸೇವೆ ಮಾಡಬೇಕು; ಬಡವರು ನಾಮಜಪದಿಂದ ದೇವರನ್ನು ಪೂಜಿಸಬೇಕು.

ವಿದ್ಯಾವಂತ ಸಾಧು ಎಂದರೆ ಆನೆಯ ದಂತದಲ್ಲಿನ ಚಿನ್ನದ ಸರದಂತೆ.

ನೀನು ಒಬ್ಬ ಏಕಾಕಿ ಎಂಬುದನ್ನು ಮರೆತು ಭಗವಂತನೊಂದಿಗೆ ನಿತ್ಯಸಂಬಂಧವಿರುವವನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸು.

ಪ್ರಪಂಚಕ್ಕೆ ಅಂಟಿಕೊಳ್ಳುವುದು ಕಡಿಮೆಯಾದಷ್ಟೂ ಮನಶ್ಶಾಂತಿ ಹೆಚ್ಚುತ್ತದೆ.

ಬೇರೆಯವರಿಗಾಗಿ ನಿನ್ನ ಕರ್ತವ್ಯಗಳು ಏನೇನು ಇರುತ್ತವೆಯೋ ಅವೆಲ್ಲವನ್ನೂ ಮಾಡು. ಆದರೆ ನಿನ್ನ ಪ್ರೀತಿಯನ್ನು ಭಗವಂತನಿಗೆ ಮಾತ್ರ ಕೊಡು.

ಶ್ರೀಮಾತೆ ಶಾರದಾದೇವಿ

## ಪ್ರಾರ್ಥನೆ

ಧ್ಯಾಯೇದ್‌ಹೃತ್ಕಮಲಮಧ್ಯೇ
ಹೇಮವರ್ಣಾಂ ಸುಖಾಸನಾಮ್ ।
ಆಲುಲಾಯಿತ ಕೇಶಾರ್ಧ -
ವಕ್ಷಸ್ಥಲಾಭಿಮಂಡಿತಾಮ್ ॥

ಹೃತ್ಕಮಲ ಮಧ್ಯದಲ್ಲಿ ಹಿರಣ್ಯವರ್ಣದಿಂದ ಶೋಭಿಸುತ್ತಾ ದೀರ್ಘ ಕೇಶರಾಶಿ ಶರೀರಾರ್ಧದಲ್ಲಿ ಹರಡಿರುವ ಪದ್ಮಾಸೀನಳಾದ ದೇವಿಯನ್ನು ಧ್ಯಾನಿಸೋಣ.

ಪ್ರಸನ್ನವದನಾಂ ಜೀವ -
ದುಃಖಗಲಿತಚೇತಸಾಮ್ ।
ಶುಭ್ರಜ್ಯೋತಿರ್ಮಯೀಂ ದೇವೀಂ
ವರದಾಂ ಸರ್ವಮಂಗಲಾಮ್ ॥

ಪ್ರಸನ್ನವದನೆಯಾದ, ಜೀವಿಗಳ ದುಃಖದಿಂದ ಆರ್ದ್ರ ಹೃದಯಿಯಾದ, ಸರ್ವಮಂಗಲೆಯೂ, ವರದೆಯೂ, ಶುಭ್ರವಾದ ಜ್ಯೋತಿ ಸ್ವರೂಪಿಣಿಯೇ ಆಗಿರುವ ದೇವಿಯನ್ನು ಧ್ಯಾನಿಸೋಣ.

ರಾಮಕೃಷ್ಣಗತಪ್ರಾಣಾಂ
ತನ್ನಾಮಶ್ರವಣಪ್ರಿಯಾಮ್ ।
ತದ್ಭಾವರಂಜಿತಾಕಾರಾಂ
ಜಗನ್ಮಾತೃಸ್ವರೂಪಿಣೀಮ್ ॥

ಯಾರ ಪ್ರಾಣಗಳು ಶ್ರೀರಾಮಕೃಷ್ಣರಲ್ಲೇ ನೆಲೆಸಿರುವುದೊ, ಯಾರಿಗೆ ಅವರ ನಾಮಶ್ರವಣ ಅತ್ಯಂತ ಪ್ರಿಯವಾದುದೊ, ಯಾರ ಆಕಾರವು ಅವರ ಚಿಂತನೆ, ಭಾವಗಳಿಂದ ರಂಜಿತವಾಗಿದೆಯೋ ಅಂತಹ ಜಗನ್ಮಾತೆಯ ಸ್ವರೂಪಿಣಿಯೇ ಆದ ದೇವಿಯನ್ನು ಧ್ಯಾನಿಸೋಣ.

ಸ್ನೇಹಮಯೀಂ ಶಿವಾಂ ಶಾಂತಾಂ
ಭಕ್ತಿಮುಕ್ತಿಪ್ರದಾಯಿನೀಮ್ ।
ಸರ್ವಜೀವತ್ರಾಣಕರ್ತ್ರೀಂ
ಶಾರದಾಂ ಜ್ಞಾನದಾಯಿನೀಮ್ ॥

ಸ್ನೇಹಮಯಿಯೂ, ಶುಭಕರಳೂ, ಶಾಂತಸ್ವರೂಪಿಣಿಯೂ, ಸರ್ವ ಜೀವರ ಸಂರಕ್ಷಕಳೂ, ಹಾಗೂ ಭಕ್ತಿ ಮುಕ್ತಿಯನ್ನು ನೀಡುವ ಜ್ಞಾನ ಪ್ರದಾಯಿನಿಯಾದ ಶಾರದಾದೇವಿಯನ್ನು ಧ್ಯಾನಿಸೋಣ.